ಕರ್ನಾಟಕ ವಿಧಾನಸಭೆ

ಸದನವು ವಿಧಾನಸೌಧದಲ್ಲಿರುವ ಸಭೆಯ ಸಭಾಂಗಣದಲ್ಲಿ

ಶನಿವಾರ 16ನೇ ಜನವರಿ 1993 ಬೆಳಿಗ್ಗೆ 11.15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯಾವತ್ ತೀರ್ಪಿನ ಬಗ್ಗೆ

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ತಮ್ಮನ್ನು ಈಗ ತಾನೇ ಭೇಟಿ ಮಾಡಿ, ಒಂದು ಪತ್ರ ನೀಡಿದ್ದೇನೆ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀಮಾನ್ ವಿಜಯಭಾಸ್ಕರ ರೆಡ್ಡಿಯವರು ಬಚಾವತ್ ತೀರ್ಪಿನ ಮರು ಪರಿಶೀಲನೆಗೆ ಆಂಧ್ರದ ಅಸಮ್ಮತಿ ಎಂದು ಹೇಳಿ ಕೃಷ್ಣ ಯೋಜನೆಗಳ ಬಗ್ಗೆ ಅವರು ಒಂದು ಹೇಳಿಕೆಯನ್ನು ಮಾಡಿದ್ದಾರೆ. ರಾಜ್ಯ ಸರ್ಕಾರದ ನಿಲುವು ಈ ಬಗ್ಗೆ ಯಾವ ರೀತಿ ಇದೆ ಮತ್ತು 2000ದ ಇಸವಿಯ ಹೊತ್ತಿಗೆ ಈ ಒಂದು ಯೋಜನೆಯನ್ನು ಮುಗಿಸುವುದರ ಬಗ್ಗೆ ರಾಜ್ಯ ಸರ್ಕಾರದ ಒಂದು ಪರಿಶ್ರಮ ಏನು? ಅದಕ್ಕಾಗಿ ರಾಜ್ಯ ಸರ್ಕಾರ ತಾವು ಕೈಗೊಂಡಿರತಕ್ಕಂಥ ಕ್ರಮಗಳು ಏನು? ಅದನ್ನು ತಿಳಿಸತಕ್ಕದ್ದು.

ಶ್ರೀ ಸಿ. ಬೈರೇಗೌಡ:- ಯಾರಿಗೆ ಹೇಳುತ್ತಾ ಇದ್ದೀರಿ?

ಶ್ರೀ ವಾಟಾಳ್ ನಾಗರಾಜ್:- ನಾವು ಅಧ್ಯಕ್ಷರಿಗೆ ಹೇಳೋಣ.

ಶ್ರೀ ಸಿ. ಬೈರೇಗೌಡ:- ಬಹಳ ಪ್ರಮುಖವಾದಂಥ ವಿಚಾರ ಆಗಿರುವುದರಿಂದ ಉತ್ತರ ಕೊಡತಕ್ಕವರು ಮುಖ್ಯಮಂತ್ರಿಗಳು, ಅವರಿಗೆ ಹೇಳಿದರೆ, ಉತ್ತರ ಸಿಗುತ್ತದೆ.

ಅಧ್ಯಕ್ಷರು:- ಮುಖ್ಯಮಂತ್ರಿಗಳು ಬಂದಾಗ ಹೇಳಿ,

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ರಾಯಚೂರು, ಕಲ್ಬುರ್ಗಿಯಲ್ಲಿ ನಕ್ಸಲೀಯರ ನೆಲೆಗಳು ಇದೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ವಿಜಯಭಾಸ್ಕರ ರೆಡ್ಡಿಯವರು ತಿಳಿಸಿದ್ದಾರೆ.

ಅಧ್ಯಕ್ಷರು:- ಅದಕ್ಕೆ ಶಿವಣ್ಣನವರು ಏನು ಹೇಳುತ್ತಾರೆ, ಕೇಳೋಣ.

ಶ್ರೀ ಬಿ. ಶಿವಣ್ಣ:- ಆಂಧ್ರದ ಬಾರ್ಡರ್‌ನಲ್ಲಿ ನಕ್ಸಲಿಯರ ಹಾವಳಿ ಇರಬಹುದು.

ಶ್ರೀ ವಾಟಾಳ್ ನಾಗರಾಜ್:- ಯಾರು, ಶಿವಣ್ಣವರು, ಅವರು ಈಗ ಮಂತ್ರಿಗಳಲ್ಲ.

ಅಧ್ಯಕ್ಷರು:- ಮುಖ್ಯಮಂತ್ರಿಗಳು ಬಂದಾಗ ಎಕ್ಸ್‌ಪ್ಲೇನ್ ಮಾಡಿ, ಹೇಳುತ್ತಾರೆ.

(2) ಬೊಂಬಾಯಿಯಲ್ಲಿ ನಡೆದ ಹಿಂಸಾಚಾರದಿಂದ ಕನ್ನಡಿಗರ ವಲಸೆ

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, 145ರ ನಿಧಿ ಅನ್ವಯ ನಾನೊಂದು ನಿರ್ಣಯ ಕಳುಹಿಸಿದ್ದೇನೆ. ಈ ನಿರ್ಣಯದ ಜೊತೆಯಲ್ಲಿ, ಏಳು ದಿವಸಗಳ ನೋಟಿಸ್ ಬೇಕೆಂಬ ನಿಯಮ ಇದೆ. ದಯಮಾಡಿ ಅದನ್ನು ಸಸ್ಪೆಂಡ್ ಮಾಡಿ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಬೊಂಬಾಯಿ, ಅಹಮದಾಬಾದ್‌ನಲ್ಲಿ ದಿನನಿತ್ಯ ಕಳೆದ 10-11 ದಿವಸಗಳಿಂದ ಹಿಂಸಾಚಾರ ನಡೆಯುತ್ತಿದೆ. ಇದರಿಂದ ಕನ್ನಡಿಗರು, ಕನ್ನಡೇತರರು, ವಲಸೆ ಬರುತ್ತಿದ್ದಾರೆ. ರಾಜ್ಯದ ಬಹುತೇಕ ಕಡೆ ಅವರು ಬರುತ್ತಿದ್ದಾರೆ. ರಾಜ್ಯ

ಸರ್ಕಾರದವರು ಏನು ರಕ್ಷಣೆ ಕೊಟ್ಟಿದ್ದಾರೆ? ಬರತಕ್ಕವರ ಸಂಖ್ಯೆ ಎಷ್ಟು ? ಪರಿಸ್ಥಿತಿ ಏನು ಇದನ್ನು ವಿಶೇಷವಾಗಿ ಪ್ರಸ್ತಾಪ ಮಾಡುವುದಕ್ಕೆ ಮುಖ್ಯವಾದ ಕಾರಣ ದೇಶದಲ್ಲಿ ಎಲ್ಲಿಯೂ ಶಾಸನಸಭೆಗಳು, ಸಂಸತ್ತು, ನಡೆಯುತ್ತಿಲ್ಲ. ಕರ್ನಾಟಕದಲ್ಲಿ ಮಾತ್ರ ವಿಧಾನ ಸಭೆ ನಡೆಯುತ್ತಿರುವುದು. ಈ ಸಭೆ ನಡೆಯತಕ್ಕ ಸಂದರ್ಭದಲ್ಲಿ ಕನ್ನಡ ನಾಡಿನ ಪ್ರತಿನಿಧಿಗಳಾದ ನಾವು ಇಂಥ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ ಎಂಬ ಅಪಪ್ರಚಾರಕ್ಕೆ ಗುರಿಯಾಗಬಾರದೆಂಬ ಸದಿಚ್ಛೆಯಿಂದ ಕನಿಷ್ಟ ಪಕ್ಷ ಸರ್ಕಾರ ಒಪ್ಪುವುದಾದರೆ ಒಂದು ನಿರ್ಣಯದ ಮೂಲಕ ನಾವು ದೇಶದಲ್ಲಿ ನಡೆಯುವಂತಹ ಹಿಂಸಾಚಾರವನ್ನು ಹತ್ತಿಕ್ಕುವುದಕ್ಕೆ ಶಾಂತಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಆ ಮಾತು ಎಷ್ಟು ಎತ್ತರಕ್ಕೆ ಹೋಗುತ್ತದೆಯೋ ಆ ಪ್ರಶ್ನೆ ಬೇರೆ, ಆದರೆ ಕೇಳತಕ್ಕ ಕರ್ತವ್ಯವನ್ನಾದರೂ ನಾವು ಮಾಡಬೇಕೆಂಬುದು ನನ್ನ ಒಂದು ಸಲಹೆ ಇದೆ. ಆದಕ್ಕೆ ತಾವು ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡುವುದಾದರೆ....

ಅಧ್ಯಕ್ಷರು:- ಆದನ್ನು ಪರಿಶೀಲಿಸುತ್ತೇನೆ.

ಶ್ರೀ ಎ.ಕೆ. ಆನಂತಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಕಮ್ಯುನಲ್ ಸಿಚ್ಯೂಯೇಷನ್ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ಆದರ ಬಗ್ಗೆ ಸವಿಸ್ತಾರವಾದ ಚರ್ಚೆ ನಡೆಯಿತು. ನಾನೂ ಕೂಡ ಆ ಸಮಯದಲ್ಲಿ ಭಾಗವಹಿಸಿ, ಒಂದು ಮಾತನ್ನು ಹೇಳಿದೆ. ಕೇವಲ ಒಂದು ಹೇಳಿಕೆಯನ್ನು ಕೊಟ್ಟಿದ್ದೆ, ಮಾತುಕತೆ ನಡೆದರೆ ಸಾಲದು, ಒಂದು ತೀವ್ರವಾದಂಥ ಉಪಯುಕ್ತವಾದಂಥ ಠರಾವುವನ್ನು ಇಲ್ಲಿ ಪಾಸ್ ಮಾಡಿ ಜನತೆಯನ್ನು ಜಾಗೃತಗೊಳಿಸಬೇಕು. ಭಾರತಕ್ಕೆ ನಮ್ಮ ರಾಜ್ಯ ಒಂದು ಮೂಲ ಮಾರ್ಗದರ್ಶನ ಮಾಡುವಂತಹ ರೀತಿಯಲ್ಲಿ ಮಾಡಬೇಕು ಎನ್ನುವ ಒಂದು ಸಲಹೆ ಮಾಡಿದ್ದೆ. ಈಗ ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಎತ್ತಿದ್ದಾರೆ, ಆದನ್ನು ತಾವು ಗಮನಹರಿಸಲು ಸೂಕ್ತವೆಂದು ಭಾವಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ಈ ನಿರ್ಣಯ ಏನಿದೆ, ಆದಕ್ಕೆ ಸರಕಾರದವರ ಒಪ್ಪಿಗೆ ಆದರೆ, ಒಂದು ಸರ್ವಸಮ್ಮತವಾದಂಥ ನಿರ್ಣಯವನ್ನು ತಾವಾದರೂ ಮಂಡಿಸಬಹುದು. ಮುಖ್ಯಮಂತ್ರಿಗಳಾಗಲಿ, ಅಥವಾ ವಿರೋಧ ಪಕ್ಷಗಳ ಮುಖಂಡರಾಗಲಿ ಮಂಡಿಸಬಹುದು.

ಅಧ್ಯಕ್ಷರು:- ಮುಖ್ಯಮಂತ್ರಿಗಳ ಜೊತೆ, ಸಂಸದೀಯ ಸಚಿವರ ಜೊತೆ ಮಾತನಾಡಿ ತೀರ್ಮಾನಕ್ಕೆ ಬರೋಣ....

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಿರ್ಣಯವನ್ನು ಸರ್ಕಾರದವರು ಬೇಕಾದರೂ ಮಂಡಿಸಬಹುದು. ಇದರಲ್ಲಿ ಕನ್ನಡಿಗರ ಪ್ರಶ್ನೆ ಅಡಕವಾಗಿದೆ. ಗಲಭೆ ಹೆಚ್ಚಾಗಿ ಬಹಳ ಜನ ರೈಲ್ವೆ ಸ್ಟೇಷನ್‌ಗೆ ಬರುತ್ತಿದ್ದಾರೆ. ಅದು ಕೋಮುಗಲಭೆ, ಅಲ್ಲಿ ಎಲ್ಲರನ್ನು ಹೊರಗಡೆ ಕಳುಹಿಸುತ್ತಿದ್ದಾರೆ. ಅಲ್ಲಿ ಭಾಷೆ ಪ್ರಶ್ನೆ ಶುರುವಾಗಿದೆ. ಈಗ ಕನ್ನಡಿಗರೆಲ್ಲಾ ಹೋಗಬೇಕು ಎಂದು ಹಿಂದೆ ಒಂದು ಸಾರಿ ಇದೇ ಪರಿಸ್ಥಿತಿ ಉದ್ಭವವಾಗಿತ್ತು. ಅಲ್ಲಿಂದ ಬಂದಂಥ ಕನ್ನಡಿಗರಿಗೆ ಸರ್ಕಾರ ಏನು ಅನುಕೂಲ ಮಾಡಿದೆಯೆಂದು ಗೊತ್ತಿಲ್ಲ. ಆದ್ದರಿಂದ ದಯಮಾಡಿ ಸರ್ಕಾರದ ಕಡೆಯಿಂದ ಈ ನಿರ್ಣಯವನ್ನು ತರುವುದಕ್ಕೆ ಅವಕಾಶ ಕೊಡಬೇಕು ಮತ್ತು ಸರ್ಕಾರದಿಂದ ಪ್ರಾಮಾಣಿಕವಾದ ಒಂದು ಹೇಳಿಕೆಯನ್ನು ಈ ವಿಚಾರದಲ್ಲಿ ಕೊಡಬೇಕು.

ಒಬ್ಬರು ಮಾನ್ಯ ಸದಸ್ಯರು:- ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು, ನೀರಾವರಿ ಪಂಪುಸೆಟ್ಟಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕೆ ಐದು ಕಂಬ ಇದ್ದರೆ ಮಾತ್ರ ಸರಬರಾಜು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದರಿಂದ ರಾಜ್ಯದ ರೈತರಿಗೆ ತೊಂದರೆಯಾಗಿದೆ. ಏಕೆಂದರೆ ನೀರು ಎಲ್ಲಿ ಸಿಗುತ್ತದೆ ಅಲ್ಲಿ ಮಾತ್ರ ಕೊಳವೆಬಾವಿ ತೆಗೆಸಬೇಕಾಗುತ್ತದೆ. ವಿದ್ಯುಚ್ಛಕ್ತಿ ಇರುವ ಕಡೆ ಬಾವಿಗಳನ್ನು ತೋಡಿಸುವುದಕ್ಕೆ ಆಗುವುದಿಲ್ಲ.

ಸರ್ಕಾರದವರು ಇದನ್ನು ತೀವ್ರವಾಗಿ ಆಲೋಚಿಸಿ, ಕಳುಹಿಸಿರುವ ಸುತ್ತೋಲೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಎಲ್ಲಾ ರೈತರಿಗೆ ಈ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮತ್ತು ಅವರಿಂದ ನಿರ್ದಿಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈಗ ಸನ್ಮಾನ್ಯ ಚಂದ್ರೇಗೌಡರು ಏನೊಂದು ನಿರ್ಣಯವನ್ನು ಮಂಡಿಸಬೇಕು ಎಂದು ಸೂಚನೆ ಕೊಟ್ಟಿದ್ದಾರೆ, ಇದರ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ, ಮೊನ್ನೆ ಸದನ ಕೊನೆಯ ದಿನ ಸೇರಿದ್ದಾಗ ನಾನು ಮುಖ್ಯಮಂತ್ರಿಗಳಿಗೆ ಕೇಳಿದ್ದೆ. ಈ ರೀತಿ ಬೊಂಬಾಯಿಯಲ್ಲಿ ಗಲಭೆಯಾಗುತ್ತಿದೆ, ಬೊಂಬಾಯಿಯಿಂದ ಅನೇಕ ಜನ ಕನ್ನಡಿಗರು ಹೊರಗಡೆ ಬರುತ್ತಿದ್ದಾರೆ. ಅವರ ಸ್ಥಿತಿಗತಿಗಳೇನು, ಅವರ ಆಸ್ತಿಪಾಸ್ತಿಗೆ ತೊಂದರೆಯಾಗಿದೆ ಎಂದು ಕೇಳಿದಾಗ, ಇಲ್ಲ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಗೆ ನಾನು ಮಾತನಾಡಿದ್ದೇನೆ. ನಾನು ಸತತವಾಗಿ ಕಾನ್‌ಸ್ಟಂಟ್ ಟಚ್‌ನ್ನು ಅವರ ಜೊತೆಯಲ್ಲಿ ಇಟ್ಟುಕೊಂಡಿದ್ದೇನೆ. ಆ ರೀತಿ ಏನೂ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ನಿನ್ನೆ ದಿನ ಬೊಂಬಾಯಿಗೆ ಭೇಟಿ ನೀಡಿದ ಮೇಲೆ ಮಾನ್ಯ ಪ್ರಧಾನ ಮಂತ್ರಿಗಳು ಬೊಂಬಾಯಿಯಿಂದ ಬಹಳ ಜನ ವಲಸೆ ಹೋಗುತ್ತಿದ್ದಾರೆಂದು ಹೇಳಿದ್ದಾರೆ. ಇದನ್ನು ನಾವು ತಪ್ಪಿಸಬೇಕಾಗುತ್ತದೆ, ಒಂದು ಹಿಂಸಾಚಾರವನ್ನು ತಡೆಗಟ್ಟುವುದು ಮೊದಲನೇ ಕೆಲಸ ಆದರೆ, ಅಷ್ಟೇ ಆದ್ಯತೆಯನ್ನು ಬೊಂಬಾಯಿನಿಂದ ಹೊರಗಡೆ ವಲಸೆ ಹೋಗತಕ್ಕದನ್ನು ತಡೆಗಟ್ಟಬೇಕೆಂಬ ಮಾತನ್ನು ಸ್ವತಃ ಪ್ರಧಾನಮಂತ್ರಿಗಳೇ ಹೇಳಿದ್ದಾರೆ. ಆದ್ದರಿಂದ ನನಗಾದರೂ ಅನ್ನಿಸುತ್ತದೆ, ನಮ್ಮ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಅವರೇ ಸಂಪರ್ಕ ಮಾಡಿದರೋ ಅಥವಾ ಅವರ ಆಪ್ತ ಸಹಾಯಕ ಸಿಬ್ಬಂದಿಯವರು ಏನಾದರೂ ತಪ್ಪು ಮಾಹಿತಿ ಕೊಟ್ಟಿದ್ದಾರೆಯೋ, ಯಾವ ಮಾಹಿತಿ ಆಧಾರದ ಮೇಲೆ ಮಾನ್ಯ ವೀರಪ್ಪ ಮೊಯಿಲಿಯವರು ಹಾಗೆ ಹೇಳಿದ್ದಾರೋ ಗೊತ್ತಿಲ್ಲ. ಆದ್ದರಿಂದ ತಾವು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಶ್ರೀ ವಿ.ಎಸ್. ಕೌಜಲಗಿಯವರು ಸಂಜೆವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯದ ಮೇಲೆ ಒಂದು ಹಕ್ಕುಚ್ಯುತಿ ಸೂಚನೆಯನ್ನು ಕಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಸಂಜೆವಾಣಿ ಅಲ್ಲ ' ಈ ಸಂಜೆ '

ಅಧ್ಯಕ್ಷರು:– ಹೌದು 'ಸಂಜೆವಾಣಿ ಅಲ್ಲ ಈ ಸಂಜೆ ' ಈ ಸೂಚನೆಯನ್ನು ನಾನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಿಕೊಡುತ್ತಿದ್ದೇನೆ. ಶ್ರೀ ಅಜೀಜ್‌ಸೇಠ್ ಅವರು ಈ ಸದನದ ಮಾನ್ಯ ಸದಸ್ಯರಾದ ಯಡಿಯೂರಪ್ಪನವರ ಹೇಳಿಕೆ ಬಗ್ಗೆ ಒಂದು ಹಕ್ಕುಚ್ಯುತಿ ಸೂಚನೆಯನ್ನು ಕೊಟ್ಟಿದ್ದಾರೆ, ಅದನ್ನು ಕೂಡ ನಾನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಿಕೊಡುತ್ತಿದ್ದೇನೆ. ಶ್ರೀ ಜಿ. ಪುಟ್ಟಸ್ವಾಮಿ ಗೌಡರು ವಿಧಾನಮಂಡಲದಲ್ಲಿ ಮಂಡಿತವಾಗಿರತಕ್ಕಂಥ ಅಂದಾಜು ಸಮಿತಿಯ ವರದಿಯ ಬಗ್ಗೆ ಒಂದು ವೈಯಕ್ತಿಕ ಹೇಳಿಕೆಯನ್ನು ಕೊಡಬೇಕು ಎಂದು ನನ್ನ ಪರವಾನಗಿಯನ್ನು ಕೇಳಿದ್ದಾರೆ. ಅವರಿಗೆ ಹೇಳಿಕೆಯನ್ನು ನೀಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

(2) ಸದಸ್ಯರ ಹೇಳಿಕೆ

ಅಂದಾಜು ಸಮಿತಿಯವರು ಅಧ್ಯಕ್ಷರನ್ನು ಮಂಡಿಸಿದ ಮಧ್ಯಾಂತರ ವರದಿ ಬಗ್ಗೆ

† ಶ್ರೀ ಜಿ. ಪುಟ್ಟಸ್ವಾಮಿಗೌಡ:– ಸನ್ಮಾನ್ಯ ಅಧ್ಯಕ್ಷರೇ, ವಿಧಾನಸಭೆಯಲ್ಲಿ ದಿನಾಂಕ 5.1.1993ರಂದು ಅಂದಾಜು ಸಮಿತಿಯವರು ಮಂಡಿಸಿರುವ ಮಧ್ಯಂತರ ವರದಿಯ ಸತ್ಯಾಸತ್ಯತೆ ಬಗ್ಗೆ ನಾನು ನೀಡಿದ ಸ್ಪಷ್ಟನೆ.